ಕೇಂದ್ರ ನೆರವಿನಿಂದ ಪ್ರವಾಸೋದ್ಯಮ ಸ್ಥಳಗಳ ಅಭಿವೃದ್ಧಿ.

326 (297) ಶ್ರೀ ಈಶ್ವರ ಭೀಮಣ್ಣ ಖಂಡ್ರೆ (ಭಾಲ್ಕಿ) :– ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಕಳೆದ 2 ವರ್ಷದ ಅವಧಿಯಲ್ಲಿ ರಾಜ್ಯದ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರವು ಎಷ್ಟು ನೆರವನ್ನು ನೀಡಿದೆ ;

(ಆ) ಕೇಂದ್ರ ನೆರವಿನಿಂದ ರಾಜ್ಯದ ಯಾವ ಯಾವ ಪ್ರವಾಸೋದ್ಯಮ ಸ್ಥಳಗಳನ್ನು ಅಭಿವೃದ್ಧಿಪಡಿಸಲಾಗಿದೆ ;

(ಇ) ಎಷ್ಟು ಪ್ರಸ್ತಾವನೆಗಳು ಒಪ್ಪಿಗೆಗಾಗಿ ಕೇಂದ್ರ ಸರ್ಕಾರದ ಮುಂದೆ ಇದೆ ;

(ಈ) ಈ ಪ್ರಸ್ತಾವನೆಗಳಿಗೆ ಕೇಂದ್ರ ಮಂಜೂರಾತಿ ನೀಡಿದ್ದಲ್ಲಿ ಇದರಿಂದ ರಾಜ್ಯದ ಯಾವ ಯಾವ ಪ್ರವಾಸಿ ಸ್ಥಳಗಳನ್ನು ಕೇಂದ್ರದ ನೆರವಿನಿಂದ ಅಭಿವೃದ್ಧಿಪಡಿಸಲಾಗುವುದು;

(ಉ) ಈ ಪೈಕಿ ಬೀದರ್ ಜಿಲ್ಲೆಯ ವಿಶೇಷವಾಗಿ ಭಾಲ್ಕಿ ಮತ ಕ್ಷೇತ್ರದ ಯಾವ ಯಾವ ಪ್ರವಾಸಿ ಸ್ಥಳಗಳನ್ನು ಕೇಂದ್ರದ ನೆರವಿನಿಂದ ಅಭಿವೃದ್ಧಿ ಪಡಿಸಲಾಗುವುದು ?

ಶ್ರೀ ಜಿ. ಜನಾರ್ಧನರೆಡ್ಡಿ (ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು):–

(ಅ) ಕಳೆದ 2 ವರ್ಷಗಳಲ್ಲಿ ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯದಿಂದ ರೂ. 5186.22 ಲಕ್ಷಗಳನ್ನು ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

(ಆ) ರಾಜ್ಯದ ಹಲವಾರು ಪ್ರವಾಸಿ ತಾಣಗಳಲ್ಲಿ ಕೇಂದ್ರದ ನೆರವಿನೊಂದಿಗೆ ಪ್ರವಾಸಿ ಸೌಲಭ್ಯಗಳನ್ನು ಅಳವಡಿಸಿ ಅಭಿವೃದ್ಧಿ ಪಡಿಸಲಾಗಿದೆ. ಅವುಗಳಲ್ಲಿ ಪ್ರಮುಖ ಸ್ಥಳಗಳು ಈ ಕೆಳಕಂಡಂತಿವೆ.

ಚಿತ್ರದುರ್ಗ, ಶ್ರೀರಂಗಪಟ್ಟಣ, ಬೀದರ್, ಮಡಿಕೇರಿ, ಹಾಸನ, ಬೇಲೂರು, ಶ್ರವಣಬೆಳಗೊಳ, ಮೇಲುಕೋಟೆ, ಬಾದಾಮಿ, ಮಹಾಕೂಟ, ಐಹೊಳೆ, ಧಾರವಾಡ, ಕಮಲಾಪುರ (ಹಂಪಿ), ಶಿವಮೊಗ್ಗ, ಕಾರವಾರ, ಉಡುಪಿ, ಗುಲ್ಬರ್ಗಾ, ಬಸವಕಲ್ಯಾಣ, ಬಿಜಾಪುರ, ಮಂಡ್ಯ, ಭೀಮೇಶ್ವರಿ, ಗಾಳಿಬೋರೆ, ದೊಡ್ಡಮಾಕಳಿ, ಭದ್ರಾ, ಕೆ. ಗುಡಿ, ಭಗವತಿ, ಸೀತಾನದಿ, ಆನೆಝರಿ ಮುಂತಾದುವುಗಳು.

(ಇ) ಒಟ್ಟು 12 ಪ್ರಸ್ತಾವನೆಗಳು ಅನುಮೋದನೆಗಾಗಿ ಕೇಂದ್ರದ ಪ್ರವಾಸೋದ್ಯಮದ ಮಂತ್ರಾಲಯದಲ್ಲಿ ಬಾಕಿ ಇದೆ.

(ಈ) ಈ 12 ಪ್ರಸ್ತಾವನೆಗಳಿಗೆ ಒಪ್ಪಿಗೆ ಮಾಡಿದಲ್ಲಿ, ಈ ಕೆಳಕಂಡ ಪ್ರವಾಸಿ ತಾಣಗಳಲ್ಲಿ ಪ್ರವಾಸಿ ಸೌಲಭ್ಯಗಳನ್ನು ನಿರ್ಮಿಸಲಾಗುವುದು.

ವಾಣಿವಿಲಾಸ ಸಾಗರ, ಗೋಕರ್ಣ, ಪಿಲಿಕುಳ ನಿಸರ್ಗಧಾಮ, ಆಲಮಟ್ಟಿ ಅಣೆಕಟ್ಟು, ಗುಲ್ಬರ್ಗಾ, ಬೀದರ್, ಶಿವನಸಮುದ್ರ, ಮೈಸೂರು, ಬಳ್ಳಾರಿ ಕೋಟೆ.

(ಉ) ಕೇಂದ್ರ ಸರ್ಕಾರದಲ್ಲಿ ಬಾಕಿಯಿರುವ ಪ್ರಸ್ತಾವನೆಗಳಲ್ಲಿ ಭಾಲ್ಕಿ ಮತ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ಆದರೆ ಈಗಾಗಲೇ ಬೀದರ್ ಜಿಲ್ಲೆಯ ಭಾಲ್ಕಿ ಕ್ಷೇತ್ರ ಕಾರಂಜಾ ಅಣೆಕಟ್ಟಿನ ಪ್ರದೇಶದಲ್ಲಿ ಪ್ರವಾಸಿ ಸೌಲಭ್ಯಗಳನ್ನು ಅಭಿವೃದ್ಧಿ ಪಡಿಸಲು ಕೇಂದ್ರದ ನೆರವನ್ನು ಪಡೆಯಲಾಗಿದೆ. ಈ ಪ್ರದೇಶದಲ್ಲಿ ಉದ್ಯಾನವನವನ್ನು ಅಭಿವೃದ್ಧಿಪಡಿಸಲು ಸರ್ವೆ ಕಾರ್ಯವನ್ನು ಪ್ರಾರಂಭಿಸಲಾಗಿದೆ.

ಬೋರ್‌ವೆಲ್‌ಗಳನ್ನು ಕೊರೆಯುವುದು.

327 (298) ಶ್ರೀ ಜಾರ್ಜ್ ಕೆ.ಜೆ. (ಸರ್ವಜ್ಞನಗರ) :– ಮಾನ್ಯ ವಸತಿ ವಾರ್ತಾ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕಾವೇರಿ ನೀರಿನ ಅಭಾವ ಬಹಳ ಹೆಚ್ಚಾಗಿರುವುದರಿಂದ ಸುಮಾರು 60 ಬೋರ್‌ವೆಲ್‌ಗಳನ್ನು ಕೊರೆಯುವ ಬಗ್ಗೆ ಸಲ್ಲಿಸಿದ ಪ್ರಸ್ತಾವನೆ ಯಾವ ಹಂತದಲ್ಲಿದೆ (ವಿವರ ನೀಡುವುದು) ?

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ವಸತಿ ವಾರ್ತಾ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು):–

(ಅ) ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ 2008 ಮತ್ತು 2009ರಲ್ಲಿ ಮೊದಲನೇ ಹಂತವಾಗಿ 8 ಬೋರ್‌ವೆಲ್‌ಗಳನ್ನು ಹಾಗೂ ಎರಡನೇ ಹಂತದಲ್ಲಿ 42 ಬೋರ್‌ವೆಲ್‌ಗಳನ್ನು ಕೊರೆಯಲಾಗಿದೆ.

ಮಾನ್ಯ ಶಾಸಕರಾದ ಶ್ರೀ. ಕೆ.ಜೆ. ಜಾರ್ಜ್‌ರವರು 60 ಬೋರ್‌ವೆಲ್‌ಗಳನ್ನು ಕೊರೆಸಲು ಪ್ರಸ್ತಾವನೆ ಸಲ್ಲಿಸಿದ ನಂತರ 55 ಬೋರ್‌ವೆಲ್‌ಗಳನ್ನು ಕೊರೆಸಲಾಗಿದ್ದು ಇವುಗಳಲ್ಲಿ ಈಗಾಗಲೇ 48 ಬೋರ್‌ವೆಲ್‌ಗಳು ಚಾಲನೆಯಲ್ಲಿದೆ. ಉಳಿದ 7 ಬೋರ್‌ವೆಲ್‌ಗಳನ್ನು ಕೆಲವೇ ದಿನಗಳಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಿ ಚಾಲನೆಗೊಳಿಸಲಾಗುವುದು. ಇನ್ನು ಮುಂದೆಯೂ 20 ಹೊಸ ಬೋರ್‌ವೆಲ್‌ಗಳನ್ನು ಹೆಚ್ಚುವರಿಯಾಗಿ ಕೊರೆಯಲಾಗುವುದು.

ಪತ್ರಿಕಾ ಛಾಯಾಗ್ರಾಹಕರ ಮೇಲೆ ಹಲ್ಲೆ.